**ಚಿಂತಾಮಣಿ ಕೊಡ್ಲೆಕೆರೆ**
ಕಲೆ: ಗಣೇಶ ಆಚಾರ್ಯ

# ಬೆಕ್ಕಿನ ಮದುವೆ

ಬೆಕ್ಕಿನ ಮದುವೆಗೆ ಬನ್ನಿ
ಹಾಲು, ತುಪ್ಪ ತನ್ನಿ!

ಮ್ಯಾಂವ್ ಮ್ಯಾಂವ್ ಮಂತ್ರ ಹೇಳಿ
ಗಂಡು ಕಟ್ಟುವುದು ತಾಳಿ

ಚಿ.ಸೌ. ಕಾಂ. ಮಾರ್ಜಾಲಿ
ತಲೆ ಎತ್ತಿದರೆ ಹೇಳಿ!

ಭಾರೀ ನಾಚಿಕೆ ಪ್ರಾಣಿ
ಗಂಡನಿಗವಳೇ ರಾಣಿ!

ಚೆನ್ನಾಗಿರುವುದು ಜೋಡಿ
ಅಜ್ಜಿಯೆ ಅಂದಳು ನೋಡಿ.

ಎಲ್ಲರು ಊಟಕೆ ಬನ್ನಿ
ಸಿಹಿ ದೂದ್ ಪೇಡಾ ತಿನ್ನಿ!

